# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 397**

**ಸದಸ್ಯರ ಹೆಸರು : ಶ್ರೀ. ಎನ್ ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ : 19.02.2024**

**ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್ ಒದಗಿಸಲು ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆಯಿಂದ 147.69 ಕೋಟಿ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; | ಬಂದಿದೆ. |
| ಆ) | ಸರ್ಕಾರಕ್ಕೆ ನಷ್ಟವಾಗಿರುವ ಮೊತ್ತವನ್ನು ಸಂಬಂಧಿತ ಸರ್ಕಾರಿ ಅಧಿಕಾರಿಗಳಿಂದ ವಸೂಲಿ ಮಾಡಲು ಕೈಗೊಂಡ ಕ್ರಮಗಳೇನು? | ಐಸಿಟಿ ಫೇಸ್-3 ಯೋಜನೆಯ ಅಸಮರ್ಪಕ ಅನುಷ್ಠಾನದಿಂದಾಗಿ, ರೂ.147.69 ಕೋಟಿ ನಷ್ಟವಾಗಿರುವ ಬಗ್ಗೆ, ನಿವೃತ್ತ ಐ.ಎ.ಎಸ್ ಅಧಿಕಾರಿ ಶ್ರೀ.ಜಿ.ವಿ. ಕೃಷ್ಣರಾವು ರವರನ್ನು ಸದರಿ ಯೋಜನೆ ಅನುಷ್ಠಾನದಲ್ಲಿ ಲೋಪವೆಸಗಿದ ಅಧಿಕಾರಿಗಳು ಮತ್ತು ಸಂಸ್ಥೆಗಳ ಬಗ್ಗೆ, ತನಿಖೆ ನಡೆಸಲು ನೇಮಕ ಮಾಡಲಾಗಿತ್ತು. ಅದರಂತೆ ತನಿಖೆ ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. ಈ ವರದಿಯನ್ನಾಧರಿಸಿ ಐಸಿಟಿ ಫೇಸ್-3 ಪ್ರಕರಣದ ವಿಸ್ತೃತ ತನಿಖೆ ನಡೆಸಲು ಒಳಾಡಳಿತ ಇಲಾಖೆಯ ಮೂಲಕ ಸಿಐಡಿ ಘಟಕಕ್ಕೆ ವಹಿಸಲು ಕ್ರಮವಹಿಸಲಾಗಿದೆ. |

**ಇಪಿ 8 ಇಜಿಓವಿ 2024**

(ಎಸ್. ಮಧುಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**